## ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಮೂಡಬಿದ್ರೆ

## ಸಿ.ಸಿ.ನಂಃ**637/2020**

ಪಿರ್ಯಾದುದಾರರು ಃ ರಾಜ್ಯದ ಪರವಾಗಿಃ ಮೂಡಬಿದ್ರಿ ಪೊಲೀಸ್ ಠಾಣೆ

-ವಿರುದ್ಧ-

ಆರೋಪಿತರು ಃ

1. ವಿನಯ್ ಡೆನ್ನಿಸ್ ಪಿಂಟೋ
ಬಿನ್ ಲೂಯಿಸ್ ಪಿಂಟೋ,
ವಾಸಃ C/o ಬ್ಯೂರೋ ವೆರಿಟಾಸ್,
ಡೂನೆ ಬಿಲ್ಡಿಂಗ್, 2ನೇ ಮಹಡಿ,
211 ಆಫೀಸ್, 2ನೇ ಡಿಸೆಂಬರ್ ರಸ್ತೆ,
ಸಟ್ವಾ ಅಂಚೆ, ಬ್ಲಾಕ್ ನಂಬ್ರ 9110,
ದುಬೈ ಯುನೈಟೆಡ್ ಅರಬ್ ಎಮಿರೇಟ್ಸ್.

2. ಶ್ರೀಮತಿ ಕ್ಲೊಟಿಲ್ಡ ಕುವೆಲ್ಲೋ ಮಿರಾಂದ
ಕೊಂ ಲಾರೆನ್ಸ್ ಡೆನ್ನಿಸ್ ಮಿರಾಂದ,
ವಾಸಃ ಸಿ.ಎಲ್ ವಿಲ್ಲಾ, ಮಿತ್ತಬೈಲು ಅಂಚೆ,
ಪುತ್ತಿಗೆ ಗ್ರಾಮ, ಮಂಗಳೂರು ತಾಲೂಕು.

## ಃದೋಷಾರೋಪಣೆಃ

**ಶ್ರೀಮತಿ ಕಾವೇರಮ್ಮ ಎಂ.,** ಬಿ.ಎ., ಎಲ್.ಎಲ್.ಬಿ, ಸಿವಿಲ್ ನ್ಯಾಯಧೀಶರು ಮತ್ತು ಜೆ.ಎಂ.ಎಫ್.ಸಿ., ಮೂಡಬಿದ್ರೆ ಆದ ನಾನು ಮೇಲ್ಕಂಡ ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಗಳನ್ನು ನಿರೂಪಿಸುತ್ತಿದ್ದೇನೆ.

ಪಿರ್ಯಾದಿದಾರರ ತಾಯಿ ಶ್ರೀಮತಿ ಥೆರೇಸಾ ಪಿಂಟೋರವರ ಮಾನಸಿಕ ಸ್ಥಿತಿ ಸರಿ ಇಲ್ಲದೆ ಇರುವ ಮತ್ತು ಅವರಿಗಿದ್ದ ಅಲ್ಜೀಮರ್ ಖಾಯಿಲೆಯ ದುರ್ಲಾಭವನ್ನು ಪಡೆದುಕೊಂಡು 1ನೇ ಆರೋಪಿಯಾದ ವಿನಯ್ ಡೆನ್ನಿಸ್ ಪಿಂಟೋರವರು 2ನೇ ಆರೋಪಿಯಾದ ಶ್ರೀಮತಿ ಕ್ಲೊಟಿಲ್ಡ ಕುವೆಲ್ಲೋ ಮಿರಾಂದರವರ ಸಹಾಯದಿಂದ ದಿನಾಂಕ 29-07-2016 ರಂದು ಪಿರ್ಯಾದಿದಾರರ ತಾಯಿಯನ್ನು ಅವರ ಬಾಬ್ತು ಜಮೀನನ್ನು ಖರೀದಿ ಮಾಡಿರುವುದಾಗಿ ಸುಳ್ಳು ಕ್ರಯಪತ್ರವನ್ನು ತಯಾರಿಸುವ ಸಲುವಾಗಿ ಮೂಡಬಿದ್ರೆ ಸಬ್ ರಿಜಿಸ್ಟ್ರಾರ್ ಕಚೇರಿಗೆ ಕರೆದುಕೊಂಡು ಹೋಗಿರುತ್ತೀರಿ. ಆದ್ದರಿಂದ, ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 468 ಸಹವಾಚಕ ಕಲಂ 34 ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಎರಡನೇಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಶ್ರೀಮತಿ ಥೆರೇಸಾ ಪಿಂಟೋರವರವರಿಗೆ ಅವರ ಬಾಬ್ತು ಜಮೀನಿನ ಖರೀದಿಗಾಗಿ ರೂ.18,65,000/- ನಗದನ್ನು ನೀಡುವುದಾಗಿ ಹೇಳಿ ಸುಳ್ಳು ಕ್ರಯಪತ್ರವನ್ನು ತಯಾರಿಸಿರುತ್ತೀರಿ. ಆದ್ದರಿಂದ, ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 423 ಸಹವಾಚಕ ಕಲಂ 34 ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಮೂರನೇಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಶ್ರೀಮತಿ ಥೆರೇಸಾ ಪಿಂಟೋರವರವರಿಗೆ ಅವರ ಬಾಬ್ತು ಜಮೀನಿನ ಖರೀದಿಯ ಸಂಬಂಧ ರೂ.18,65,000/- ನಗದನ್ನು ನೀಡುವುದಾಗಿ ಹೇಳಿ ಸದರಿ ಹಣವನ್ನು ನೀಡದೇ ಮೋಸ ಮಾಡಿರುತ್ತೀರಿ. ಆದ್ದರಿಂದ ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 420 ಸಹವಾಚಕ ಕಲಂ 34 ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಕೊನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಶ್ರೀಮತಿ ಥೆರೇಸಾ ಪಿಂಟೋರವರವರಿಗೆ ಅವರ ಬಾಬ್ತು ಜಮೀನನ್ನು ಖರೀದಿಸುವುದಾಗಿ ಸುಳ್ಳು ಹೇಳಿ ನಂಬಿಕೆ ದ್ರೋಹ ಮಾಡಿರುತ್ತೀರಿ. ಆದ್ದರಿಂದ ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 406 ಸಹವಾಚಕ ಕಲಂ 34 ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಮೇಲ್ಕಂಡ ನಿಮ್ಮ ಮೇಲಿನ ಆರೋಪದ ಬಗ್ಗೆ ವಿಚಾರಣೆಯಾಗಲು ಈ ಮೂಲಕ ಆದೇಶಿಸುತ್ತೇನೆ.

ಸಹಿ/-

ದಿನಾಂಕಃ 19-11-2024

**(ಕಾವೇರಮ್ಮ. ಎಂ.)**
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಮೂಡಬಿದ್ರೆ

<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮೂಡಬಿದ್ರೆ</u>

<u>ಸಿ.ಸಿ.ನಂಃ **637/2020**</u>

ಪಿರ್ಯಾದುದಾರರು ಃ ರಾಜ್ಯದ ಪರವಾಗಿಃ ಮೂಡಬಿದ್ರೆ ಪೊಲೀಸ್ ಠಾಣೆ,

-ವಿರುದ್ಧ-

ಆರೋಪಿತರು ಃ **1)** ವಿನಯ್ ಡೆನ್ನಿಸ್ ಪಿಂಟೋ

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ **240(2)** ರಡಿ ಆರೋಪಿಯ ಹೇಳಿಕೆ</u>

ಪ್ರಶ್ನೆ 1ಃ ನಿಮ್ಮ ವಿರುದ್ಧ ಮಾಡಲಾಗಿರುವ ಆಪಾದನೆಯ ಸಾರವನ್ನು ಓದಿ ವಿವರಿಸಿ ಹೇಳಿದಾಗ ಅರ್ಥವಾಯಿತೇ?

<u>ಉತ್ತರಃ</u> ಹೌದು

ಪ್ರಶ್ನೆ 2ಃ ನಿಮ್ಮ ಮೇಲೆ ಮಾಡಲಾಗಿರುವ ದೋಷಾರೋಪಣೆಗೆ ನೀವು ಸಮ್ಮತಿಸುವಿರೋ ಇಲ್ಲವೇ ವಿಚಾರಣೆಯಾಗಬೇಕೆಂದು ಇಚ್ಛಿಸುವಿರೋ?

<u>ಉತ್ತರಃ</u> ವಿಚಾರಣೆಯಾಗಬೇಕು

(ಮೇಲಿನ ದೋಷಾರೋಪಣೆಯ ಸಾರವನ್ನು ಆರೋಪಿಗಿಂದು ಮುಕ್ತ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಲಾಗಿದ್ದು ಅದನ್ನು ಅವರು ಸರಿಯಾಗಿ ಅರ್ಥ ಮಾಡಿಕೊಂಡು ನೀಡಿದ ಯಥಾವತ್ ಹೇಳಿಕೆಯನ್ನು ದಾಖಲು ಮಾಡಲಾಯ್ತು)

ಸಹಿ/-

ದಿನಾಂಕಃ **19-11-2024**

**(ಕಾವೇರಮ್ಮ ಎಂ.)**
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಮೂಡಬಿದ್ರೆ

<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮೂಡಬಿದ್ರೆ</u>

<u>ಸಿ.ಸಿ.ನಂಃ **637/2020**</u>

ಪಿರ್ಯಾದುದಾರರು ಃ ರಾಜ್ಯದ ಪರವಾಗಿಃ ಮೂಡಬಿದ್ರೆ ಪೊಲೀಸ್ ಠಾಣೆ,

-ವಿರುದ್ಧ-

ಆರೋಪಿತರು ಃ **<u>2)</u>** ಶ್ರೀಮತಿ ಕ್ಲೊಟಿಲ್ಡ ಕುವೆಲ್ಲೋ ಮಿರಾಂದ

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 240(2) ರಡಿ ಆರೋಪಿಯ ಹೇಳಿಕೆ</u>

ಪ್ರಶ್ನೆ 1ಃ ನಿಮ್ಮ ವಿರುದ್ಧ ಮಾಡಲಾಗಿರುವ ಆಪಾದನೆಯ ಸಾರವನ್ನು ಓದಿ ವಿವರಿಸಿ ಹೇಳಿದಾಗ ಅರ್ಥವಾಯಿತೇ?

<u>ಉತ್ತರಃ</u> ಹೌದು

ಪ್ರಶ್ನೆ 2ಃ ನಿಮ್ಮ ಮೇಲೆ ಮಾಡಲಾಗಿರುವ ದೋಷಾರೋಪಣೆಗೆ ನೀವು ಸಮ್ಮತಿಸುವಿರೋ ಇಲ್ಲವೇ ವಿಚಾರಣೆಯಾಗಬೇಕೆಂದು ಇಚ್ಛಿಸುವಿರೋ?

<u>ಉತ್ತರಃ</u> ವಿಚಾರಣೆಯಾಗಬೇಕು

(ಮೇಲಿನ ದೋಷಾರೋಪಣೆಯ ಸಾರವನ್ನು ಆರೋಪಿಗಿಂದು ಮುಕ್ತ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಲಾಗಿದ್ದು ಅದನ್ನು ಅವರು ಸರಿಯಾಗಿ ಅರ್ಥ ಮಾಡಿಕೊಂಡು ನೀಡಿದ ಯಥಾವತ್ ಹೇಳಿಕೆಯನ್ನು ದಾಖಲು ಮಾಡಲಾಯ್ತು)

ಸಹಿ/-

ದಿನಾಂಕಃ **19-11-2024**

**(ಕಾವೇರಮ್ಮ ಎಂ.)**
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಮೂಡಬಿದ್ರೆ